"ಮಧುರ ಮಕ್ಕಳೇ- ಇಡೀ ಸೃಷ್ಟಿಯ ಪಾಲನಾಕರ್ತ ಒಬ್ಬ ತಂದೆಯಾಗಿದ್ದಾರೆ, ಅವರು ಎಂದೂ ಯಾರಿಂದಲೂ ಪಾಲನೆಯನ್ನು ತೆಗೆದುಕೊಳ್ಳುವುದಿಲ್ಲ, ಸದಾ ನಿರಾಕಾರನಾಗಿದ್ದಾರೆ- ಈ ಮಾತನ್ನು ಸಿದ್ಧ ಮಾಡಿ ಎಲ್ಲರಿಗೆ ತಿಳಿಸಿ"

ಪ್ರಶ್ನೆ: ಈಶ್ವರೀಯ ವಿದ್ಯಾರ್ಥಿಯ ಮೊದಲ ಮುಖ್ಯಲಕ್ಷಣವು ಏನಾಗಿರುವುದು?

ಉತ್ತರ: ಈಶ್ವರೀಯ ವಿದ್ಯಾರ್ಥಿಯು ಎಂದೂ ಮುರುಳಿಯನ್ನು ಕೇಳದೇ ಇರಲು ಸಾಧ್ಯವಿಲ್ಲ. ನನಗೆ ಮುರುಳಿ ಕೇಳಲು ಸಮಯವೇ ಸಿಗುವುದಿಲ್ಲವೆಂದು ಅವರು ಹೇಳುವುದಿಲ್ಲ. ಎಲ್ಲಿಯೇ ಇದ್ದರೂ ಸಹ ಮುರುಳಿಯ ಪಾಯಿಂಟ್ಗಳನ್ನು ತರಿಸಿಕೊಂಡಾದರೂ ಓದುತ್ತಾರೆ. ಎಷ್ಟೊಂದು ಮುರುಳಿಯ ಅಂಶಗಳು ಇರುತ್ತದೆ! ಒಂದುವೇಳೆ ಮುರುಳಿಯನ್ನೇ ಕೇಳದಿದ್ದರೆ ಹೇಗೆ ಧಾರಣೆಯಾಗುತ್ತದೆ? ಇದು ವಿದ್ಯೆಯಾಗಿದೆ, ಸುಪ್ರೀಂ ಶಿಕ್ಷಕರು ಓದಿಸುವವರಾಗಿದ್ದಾರೆ ಆದ್ದರಿಂದ ಮಕ್ಕಳು ಮುರುಳಿಯನ್ನು ಎಂದೂ ತಪ್ಪಿಸಬಾರದು.

ಗೀತೆ: ನಿಮ್ಮನ್ನು ಪಡೆದ ನಾನು ಜಗತ್ತನ್ನೇ ಪಡೆದೆನು............

ಓಂ ಶಾಂತಿ. ಈಗ ನೀವಾತ್ಮರು ತಂದೆಯಿಂದ ತಿಳಿದುಕೊಂಡಿದ್ದೀರಿ. ಮಕ್ಕಳಿಗೆ ಗೊತ್ತಿದೆ- ಶಿವತಂದೆಯೊಬ್ಬರೇ ಆಗಿದ್ದಾರೆ ಯಾರಿಗೆ ಯಾವುದೇ ಸ್ಥೂಲ ಅಥವಾ ಸೂಕ್ಷ್ಮ ಶರೀರವು ಇರುವುದಿಲ್ಲ. ಬ್ರಹ್ಮಾ-ವಿಷ್ಣು-ಶಂಕರನಿಗೂ ಸಹ ಸೂಕ್ಷ್ಮಶರೀರವನ್ನು ತೋರಿಸುತ್ತಾರೆ ಅವರಿಗೆ ಹೆಸರೂ ಸಹ ಇದೆ. ಅವರಲ್ಲಿ ಆತ್ಮವಿದೆ, ಸೂಕ್ಷ್ಮಶರೀರವಿದೆ ಎಂದು ಮಕ್ಕಳು ತಿಳಿಯುತ್ತೀರಿ. ಈ ಸಮಯದಲ್ಲಿ ತಾವು ಮಕ್ಕಳು ತ್ರಿಲೋಕಿನಾಥರಾಗುತ್ತೀರಿ. ಲಕ್ಷ್ಮೀ-ನಾರಾಯಣರನ್ನು ತ್ರಿಲೋಕಿನಾಥರೆಂದು ಹೇಳುವುದಿಲ್ಲ. ಲಕ್ಷ್ಮೀ-ನಾರಾಯಣರು ಈ ಮೂರು ಲೋಕ (ಮೂಲವತನ, ಸೂಕ್ಷ್ಮವತನ, ಸ್ಥೂಲವತನ) ಗಳನ್ನು ಅರಿತುಕೊಂಡಿಲ್ಲ. ಪ್ರತಿಯೊಂದು ಮಾತನ್ನು ಸರಿಯೇ ಅಥವಾ ತಪ್ಪಾ ಎಂದು ಬುದ್ಧಿಯಿಂದ ನಿರ್ಣಯ ಮಾಡಬಹುದು. ಕೇವಲ ಏನು ಕೇಳಿದರೋ ಅದನ್ನು ಸತ್ಯ, ಸತ್ಯವೆಂದು ಹೇಳುವುದಂತೂ ಭಕ್ತಿಮಾರ್ಗವಾಗಿದೆ. ಇಲ್ಲಂತೂ ಚೆನ್ನಾಗಿ ತಿಳಿದುಕೊಳ್ಳಬೇಕಾಗಿದೆ. ಅವರ ಮಂದಿರಗಳಂತೂ ಅನೇಕ ಪ್ರಕಾರದಲ್ಲಿ ಮಾಡಲ್ಪಟ್ಟಿದೆ ಮತ್ತು ಅನೇಕ ಪ್ರಕಾರದ ಹೆಸರನ್ನು ಇಟ್ಟಿದ್ದಾರೆ. ಅನೇಕ ಮಂದಿರಗಳವೆ, ಅಲ್ಲಿ ಲಿಂಗವನ್ನಿಟ್ಟಿರುತ್ತಾರೆ. ಬಾಂಬೆಯಲ್ಲಿ ಮಂದಿರವಿದೆ ಅದನ್ನು ಬಬುಲ್ನಾಥನೆಂದು ಹೇಳುತ್ತಾರೆ. ತಂದೆಯಂತೂ ಒಬ್ಬರೇ ಆಗಿದ್ದಾರೆ. ವಿದೇಶ ಮುಂತಾದ ಕಡೆಯೂ ಸಹ ಅನೇಕ ಹೆಸರುಗಳನ್ನಿಟ್ಟಿದ್ದಾರೆ. ಈಗ ಮಕ್ಕಳಿಗೆ ಗೊತ್ತಿದೆ- ನಾವು ಆತ್ಮರಾಗಿದ್ದೇವೆ, ಪರಮಪಿತ ಪರಮಾತ್ಮ ಮಕ್ಕಳಿಗೆ ತಿಳಿಸುತ್ತಾರೆ- ಮೂರು ಲೋಕಗಳ ಜ್ಞಾನವನ್ನು ಕೊಡುತ್ತಿದ್ದಾರೆ. ಈ ಸಮಯದಲ್ಲಿ0iÉೕೀ ನೀವು ತ್ರಿಲೋಕಿನಾಥರಾಗಿದ್ದೀರಿ ಏಕೆಂದರೆ ನೀವು ತಿಳಿದಿದ್ದೀರಿ. ಎಲ್ಲಿಯತನಕ ಯಾರು ಅರಿತುಕೊಳ್ಳುವುದಿಲ್ಲವೋ ಅವರು ಮಾಲೀಕನಾಗಲು ಹೇಗೆ ಸಾಧ್ಯ? ಕೃಷ್ಣನನ್ನೂ ಸಹ ತ್ರಿಲೋಕಿನಾಥನೆಂದು ಹೇಳಲು ಸಾಧ್ಯವಿಲ್ಲ. ಕೇವಲ ಬ್ರಹ್ಮಾರವರ ಸಂತಾನ ಬ್ರಾಹ್ಮಣರೇ ತ್ರಿಲೋಕಿನಾಥರಾಗಿದ್ದೀರಿ, ನಿಮಗೆ ಮೂರೂ ಲೋಕಗಳ ಜ್ಞಾನವಿದೆ. ಜ್ಞಾನಸಾಗರ, ಆನಂದಸಾಗರ ತಂದೆಯಾಗಿದ್ದಾರೆ, ಆ ನಿರಾಕಾರ ತಂದೆಯು ನಮಗೆ ಜ್ಞಾನವನ್ನು ಕೊಡುತ್ತಿದ್ದಾರೆ. ಯಾವುದೇ ಸಾಕಾರಿ ಮನುಷ್ಯನನ್ನು ಭಗವಂತನೆಂದು ಹೇಳಲು ಸಾಧ್ಯವಿಲ್ಲ. ಇಲ್ಲಂತೂ ಸರ್ವವ್ಯಾಪಿ ಎಂದು ಹೇಳಿಬಿಡುತ್ತಾರೆ.

ಈಗ ನೀವು ಮಕ್ಕಳು ತಿಳಿದುಕೊಂಡಿದ್ದೀರಿ- ಪರಮಾತ್ಮ ಒಬ್ಬರೇ ನಿರಾಕಾರ ಶಿವನಾಗಿದ್ದಾರೆ, ಅವರಿಗೆ ಪಾಲನೆಯೂ ಸಹ ಆಗುವುದಿಲ್ಲ. ಮತ್ತೆಲ್ಲರದು ಪಾಲನೆಯಾಗುತ್ತದೆ. ಆತ್ಮವು ಚಿಕ್ಕಶರೀರದಲ್ಲಿ ಬರುತ್ತದೆ, ಗರ್ಭದಲ್ಲಂತೂ ತನ್ನ ಬೆರಳನ್ನು ಚೀಪುತ್ತದೆ. ಶಿವತಂದೆಗೆ ಚೀಪಲು ಬೆರಳಿಲ್ಲ. ಶಿವತಂದೆಯು ತಿಳಿಸುತ್ತಾರೆ- ನಾನಂತೂ ಗರ್ಭದಲ್ಲಿ ಬರುವುದಿಲ್ಲ. ಮತ್ತೆಲ್ಲರೂ ಗರ್ಭದಲ್ಲಿ ಬರುತ್ತಾರೆ ನಂತರ ಅವರ ಪಾಲನೆಯೂ ಸಹ ಆಗುತ್ತದೆ. ತಾಯಿಯು ಹೇಗೆ ಆಹಾರ ಮುಂತಾದವುಗಳನ್ನು ಸೇವಿಸುತ್ತಾರೆ, ಯಾವುದಾದರೂ ಖಾರ ಮುಂತಾದ ಪದಾರ್ಥಗಳನ್ನು ಸೇವಿಸಿದರೆ ಅದರ ಪ್ರಭಾವವು ಮಕ್ಕಳ ಮೇಲೆ ಬಿದ್ದಾಗ ಮಕ್ಕಳಿಗೆ ತೊಂದರೆಯಾಗುತ್ತದೆ. ಶಿವತಂದೆಯು ಕೇಳುತ್ತಾರೆ- ನೀವು ನನ್ನ ಪಾಲನೆಯನ್ನು ಹೇಗೆ ಮಾಡುತ್ತೀರಿ? ನನ್ನನ್ನು ಇಡೀ ಸೃಷ್ಟಿಯ ಪಾಲನಕರ್ತನೆಂದು ಹೇಳುತ್ತಾರೆ ಅಂದಾಗ ನನಗಿಂತ ಮೇಲೆ ಯಾರೂ ಇಲ್ಲ. ಈ ಮಾತುಗಳನ್ನು ಚೆನ್ನಾಗಿ ಅರಿತುಕೊಳ್ಳಬೇಕು. ವಿಚಾರಸಾಗರ ಮಂಥನ ಮಾಡಿ ಅನೇಕ ವಿಷಯಗಳನ್ನು ತೆಗೆಯಬೇಕು. ಅವಶ್ಯವಾಗಿ ಶಿವಬಾಬಾ ತಂದೆಯಾಗಿದ್ದಾರೆ ಅವರನ್ನು ಪ್ರಿಯತಮನೆಂದೂ ಸಹ ಹೇಳಲಾಗುತ್ತದೆ. ಎಲ್ಲಾ ಮನುಷ್ಯ ಮಾತ್ರರೂ ಆ ಪ್ರಿಯತಮನ ಪ್ರಿಯತಮೆಯರಾಗಿದ್ದಾರೆ. ನೀವೆಲ್ಲರೂ ಪ್ರಿಯತಮೆಯರಾಗಿದ್ದೀರಿ. ಅವರು ಪ್ರಿಯತಮನಾಗಿದ್ದಾರೆ. ಪ್ರಿಯತಮ ನಿರಾಕಾರನಾಗಿದ್ದಾರೆ. ಯಾವುದೇ ಸಾಕಾರ ಅಥವಾ ಆಕಾರವನ್ನು ಪ್ರಿಯತಮನೆಂದು ಹೇಳಲು ಸಾಧ್ಯವಿಲ್ಲ. ಎಲ್ಲರ ಪ್ರಿಯತಮ ಒಬ್ಬರೇ ನಿರಾಕಾರ ತಂದೆಯಾಗಿದ್ದಾರೆ. ನಿರಾಕಾರಿ ಆತ್ಮರು ತಮ್ಮ ಪ್ರಿಯತಮನನ್ನು ನೆನಪು ಮಾಡುತ್ತಾರೆ ಅಂದಾಗ ಏಕೆ ನೆನಪು ಮಾಡುತ್ತಾರೆ? ಅವಶ್ಯವಾಗಿ ಒಂದಲ್ಲಒಂದು ತೊಂದರೆಯಿದೆ. ಎಲ್ಲಾ ಭಕ್ತರು ಭಗವಂತನನ್ನು ನೆನಪು ಮಾಡುತ್ತಾರೆ. ಈ ಪ್ರಿಯತಮ ಮತ್ತು ಪ್ರಿಯತಮೆಯರು ನಿರಾಕಾರಿಯಾಗಿದ್ದಾರೆ. ಆ ಸಾಕಾರಿ ಪ್ರಿಯತಮ, ಪ್ರಿಯತಮೆಯರಿರುತ್ತಾರೆ ಅವರದೂ ಸಹ

ಮಹಿಮೆಯಿದೆ ಮತ್ತು ಅವರು ಕೆಲವರಷ್ಟೇ ಇರುತ್ತಾರೆ. ಒಬ್ಬರು ಇನ್ನೊಬ್ಬರ ಶರೀರದ ಮೇಲೆ ಬಲಿಹಾರಿಯಾಗುತ್ತಾರೆ. ಅವರದು ಯಾವುದೇ ವಿಕಾರಕ್ಕಾಗಿ ಪ್ರೀತಿಯಿರುವುದಿಲ್ಲ. ಕೇವಲ ಒಬ್ಬರು ಇನ್ನೊಬ್ಬರನ್ನು ನೋಡುತ್ತಿರುತ್ತಾರೆ. ನೋಡದ ವಿನಃ ಸುಖವು ಬರುವುದಿಲ್ಲ. ಶರೀರವನ್ನು ನೆನಪು ಮಾಡುತ್ತಾರೆ, ಎಲ್ಲಿಯೇ ಕುಳಿತಿದ್ದರೂ ಸಹ ನನ್ನ ಸಮ್ಮುಖದಲ್ಲಿ ಪ್ರಿಯತಮ ನಿಂತಿದ್ದಾರೆಂದು ತಿಳಿಯುತ್ತಾರೆ. ಅವರಿಗೆ ಸಾಕ್ಷಾತ್ಕಾರವಾಗುತ್ತದೆ ಏಕೆಂದರೆ ಅದು ಪವಿತ್ರ ಪ್ರೇಮವಾಗಿದೆ. ಶರೀರದ ಶೋಭೆಯೂ ಇರುತ್ತದೆಯಲ್ಲವೆ, ವಿಕಾರಕ್ಕಾಗಿ ಅಲ್ಲ. ಕೇವಲ ಒಬ್ಬರು ಇನ್ನೊಬ್ಬರನ್ನು ನೋಡಿ ಖುಷಿಯಾಗುತ್ತಾರೆ. ಭೋಜನ ಮಾಡುತ್ತಿದ್ದಾಗ ಅವರ ನೆನಪು ಬಂದಿತೆಂದರೆ ಸಾಕು ಭೋಜನವೇ ಮರೆತುಹೋಗುತ್ತದೆ. ಅವರನ್ನೇ ನೋಡುತ್ತಿರುತ್ತಾರೆ. ಅವರಲ್ಲಿಯೂ ಕೆಲವರಿರುತ್ತಾರೆ, ಇಲ್ಲಂತೂ ಎಲ್ಲರೂ ಆ ಪ್ರಿಯತಮನ ಪ್ರಿಯತಮೆಯರಾಗಿದ್ದಾರೆ ಆದರೆ ಬಹಳ ಕೆಲವರೇ ಸತ್ಯ ಪ್ರಿಯತಮೆಯರಾಗಿರುತ್ತಾರೆ. ಅವರು ಗೌರವಪೂರ್ಣವಾಗಿ ಉತ್ತೀರ್ಣರಾಗುತ್ತಾರೆ. ಅಷ್ಟಮಣಿಗಳದ್ದು ಅಷ್ಟೊಂದು ಮಹಿಮೆಯಿದೆ ಅಂದಾಗ ಯಾವಾಗ ಭಕ್ತರಿಗೆ ಭಗವಂತನು ಸಿಕ್ಕಿದ್ದಾರೆಂದಮೇಲೆ ಅವರನ್ನು ಎಷ್ಟೊಂದು ನೆನಪು ಮಾಡಬೇಕು. ತಂದೆಯು ತಿಳಿಸುತ್ತಾರೆ- ಮಕ್ಕಳೇ, ನಿರಂತರ ನನ್ನನ್ನು ನೆನಪು ಮಾಡಿ ಏಕೆಂದರೆ ನನ್ನಿಂದ ನಿಮಗೆ ಬಹಳ ಸುಖವು ಸಿಗುತ್ತದೆ. ಮನುಷ್ಯರಿಂದ ಅಲ್ಪಕಾಲದ ಸುಖವು ಸಿಗುತ್ತದೆ. ಪರಸ್ಪರ ಬಹಳ ಪ್ರೀತಿಯಿರುತ್ತದೆ ಆದರೆ ಇದು ಬೇಹದ್ದಿನ ತಂದೆಯಿಂದ ಸಿಗುವ ಬೇಹದ್ದಿನ ಪ್ರೀತಿಯಾಗಿದೆ. ಬೇಹದ್ದಿನ ಪ್ರೀತಿಯು ಒಬ್ಬರಲ್ಲಿಯೇ ಇರುತ್ತದೆ ಅವರ ಯಾವುದೇ ಶಾರೀರಿಕ ಹೆಸರಿಲ್ಲವೆಂದು ಮಕ್ಕಳಿಗೆ ಗೊತ್ತಿದೆ.

ವಿಷ್ಣುವಿನ ಎರಡು ರೂಪಗಳಾದ ಲಕ್ಷ್ಮೀ-ನಾರಾಯಣರ ವಂಶಾವಳಿಯಿರುವುದು. ಸತ್ಯಯುಗದ ಆದಿಯಲ್ಲಿ ಲಕ್ಷ್ಮೀ-ನಾರಾಯಣರ ರಾಜ್ಯವಿರುತ್ತದೆ ಅಂದಮೇಲೆ ಅವಶ್ಯವಾಗಿ ಪ್ರಜೆಗಳೂ ಇರುತ್ತಾರೆ. ಸತ್ಯಯುಗದ ಆದಿಯಲ್ಲಿ ಎಷ್ಟು ಜನಸಂಖ್ಯೆಯಿರುತ್ತದೆ ನಂತರ ವೃದ್ಧಿಯಾಗುತ್ತಾ ಹೋಗುತ್ತದೆಯೆಂದು ಬುದ್ಧಿಯು ಹೇಳುತ್ತದೆ. ಸತ್ಯಯುಗದ ಆದಿಯಲ್ಲಿ ಲಕ್ಷ್ಮೀ-ನಾರಾಯಣರ ರಾಜ್ಯವಿತ್ತು, ಅವಶ್ಯವಾಗಿ ಜಮುನಾ ನದಿಯ ತೀರದಲ್ಲಿ ರಾಧೆ-ಕೃಷ್ಣರ ರಾಜಧಾನಿಯಿತ್ತು. ಗಂಗಾ-ಜಮುನಾ ಇತ್ಯಾದಿ ಇವಂತೂ ಅನೇಕ ನದಿಗಳಿವೆ. ನದಿಯ ತೀರದಲ್ಲಿರುತ್ತಿದ್ದರು, ಸಾಗರದಲ್ಲಿ ಚಿನ್ನದ ದ್ವಾರಕೆ ಎಂದು ಯಾವುದನ್ನು ತೋರಿಸುತ್ತಾರೆ ಅಂತಹ ಯಾವುದೇ ಮಾತಿಲ್ಲ. ಸಾಗರದ ತೀರದಲ್ಲಿ ದೇವತೆಗಳ ರಾಜಧಾನಿಯಿರಲಿಲ್ಲ. ಈ ಬಾಂಬೆ ಇರುವುದಿಲ್ಲ ಈಗ ಇದು ನಿಮ್ಮ ಬುದ್ಧಿಯಲ್ಲಿದೆ. ಪ್ರಿಯಾತಿಪ್ರಿಯ ತಂದೆಯಾಗಿದ್ದಾರೆ. ಕ್ರೈಸ್ತನನ್ನು ಗಾಡ್ಫಾದರ್ ಎಂದು ಹೇಳುವುದಿಲ್ಲ ಏಕೆಂದರೆ ಕ್ರೈಸ್ಟ್ ಸಂದೇಶವಾಹಕ ಆಗಿದ್ದಾರೆ ಎಂದು ಗೊತ್ತಿದೆ. ಪರಮಪಿತ ಪರಮಾತ್ಮ ಅವರನ್ನು ಕಳುಹಿಸಿದ್ದಾರೆ. ನಿರಾಕಾರಿ ಪ್ರಪಂಚದಿಂದ ಬರುತ್ತಾರೆ ಅಂದಮೇಲೆ ಅವರನ್ನು ಯಾರೂ ಭಗವಂತನೆಂದು ತಿಳಿಯುವುದಿಲ್ಲ, ಧರ್ಮಸ್ಥಾಪಕನೆಂದು ತಿಳಿಯುತ್ತಾರೆ. ಹಿಂದೂ ಧರ್ಮವು ಯಾವಾಗ ಮತ್ತು ಯಾರು ಸ್ಥಾಪನೆ ಮಾಡಿದರೆಂದು ಹಿಂದೂಗಳಿಗೆ ಗೊತ್ತಿಲ್ಲ. ಹಿಂದೂ ಧರ್ಮವಂತೂ ಯಾವುದೂ ಇಲ್ಲ. ಆದಿಸನಾತನ ದೇವಿ-ದೇವತಾ ಧರ್ಮವಾಗಿದೆ. ಜನಗಣತಿಯಲ್ಲಿ ಒಂದುವೇಳೆ ನಮ್ಮನ್ನು ಕೇಳಿದರೆ ನಾವಂತೂ ಬ್ರಾಹ್ಮಣರಾಗಿದ್ದೇವೆ ಎಂದು ಹೇಳುತ್ತೇವೆ. ಈ ಸಮಯದಲ್ಲಿ ಹಿಂದೂಗಳಿಲ್ಲ. ಈ ಸಮಯದಲ್ಲಿ ನಾವು ಬ್ರಹ್ಮಾಮುಖವಂಶಾವಳಿ ಬ್ರಾಹ್ಮಣರಾಗಿದ್ದೇವೆ ಆದರೆ ಭಲೆ ಬ್ರಾಹ್ಮಣ ಧರ್ಮದವರೆಂದು ತಿಳಿಸಿದರೂ ಸಹ ಅವರು ಹಿಂದೂ ಧರ್ಮವೆಂದೇ ಬರೆದುಕೊಳ್ಳುತ್ತಾರೆ. ಸತ್ಯಯುಗದಲ್ಲಂತೂ ಜನಗಣತಿಯು ಇರುವುದಿಲ್ಲ ಏಕೆಂದರೆ ಅಲ್ಲಿರುವುದೇ ಒಂದು ದೇವಿ-ದೇವತಾಧರ್ಮ ಆದ್ದರಿಂದ ಕೇಳುವ ಅವಶ್ಯಕತೆಯಿಲ್ಲ. ಇಲ್ಲಿ ಅನೇಕ ಧರ್ಮಗಳಿವೆ ಆದ್ದರಿಂದ ಕೇಳುತ್ತಾರೆ. ಇವೆಲ್ಲಾ ಮಾತುಗಳನ್ನು ತಂದೆಯು ತಿಳಿಸಿಕೊಡುತ್ತಾರೆ ಆದ್ದರಿಂದ ಬುದ್ಧಿಯಿಂದ ತಂದೆಯನ್ನು ನೆನಪು ಮಾಡಬೇಕು. ಅವರಂತೂ ನಿರಾಕಾರನಾಗಿದ್ದಾರೆ ಮತ್ತು ಅವರಿಗೆ ಒಂದೇ ಹೆಸರಿದೆ- ಬ್ರಹ್ಮಾ-ವಿಷ್ಣು-ಶಂಕರನಿಗೂ ಸಹ ಆಕಾರಿ ಚಿತ್ರವು ಕಂಡುಬರುತ್ತದೆ ಆದರೆ ಶಿವನಿಗೆ ಎಲ್ಲಿದೆ? ಇವರು ಭಗವಂತನಾಗಿದ್ದಾರೆ. ನಾವು ತಮ್ಮನ್ನು ಭಗವಂತನೆಂದು ಕರೆಸಿಕೊಳ್ಳಲು ಸಾಧ್ಯವಿಲ್ಲವೆಂಬುದನ್ನು ತಿಳಿಯುತ್ತಾರೆ. ಏಕೆಂದರೆ ನಾವಾತ್ಮಗಳು ಪುನರ್ಜನ್ಮವನ್ನು ತೆಗೆದುಕೊಳ್ಳುತ್ತೇವೆ. ತಂದೆಯೂ ಸಹ ಪುನರ್ಜನ್ಮವನ್ನು ತೆಗೆದುಕೊಳ್ಳುತ್ತಾರೆ ಎಂದಲ್ಲ.

ಈಗ ನೀವು ಮೂರೂ ಲೋಕಗಳನ್ನು ತಿಳಿದುಕೊಂಡಿದ್ದೀರಿ ಆದ್ದರಿಂದ ನಿಮಗೆ ತ್ರಿಲೋಕಿನಾಥನೆಂದು ಹೆಸರಿದೆ. ತಿಳಿದುಕೊಂಡಿರುವವರೇ ಒಡೆಯರಾಗುವರಲ್ಲವೆ. ನಿಮಗೀಗ ಮೂರುಲೋಕಗಳ ಜ್ಞಾನವಿದೆ. ನೀವು ಬ್ರಾಹ್ಮಣರೇ ತಿಳಿದುಕೊಂಡಿದ್ದೀರಿ. ಮತ್ತ್ಯಾರೂ ತಿಳಿದುಕೊಳ್ಳಲು ಸಾಧ್ಯವಿಲ್ಲ, ಕೃಷ್ಣನೂ ಸಹ ತ್ರಿಲೋಕಿನಾಥನಲ್ಲ. ಅಲ್ಲಿ ಈ ಜ್ಞಾನವೇ ಇರುವುದಿಲ್ಲ. ಈ ಜ್ಞಾನವು ಕೇವಲ ನಿಮಗಷ್ಟೇ ಸಿಗುತ್ತದೆ ಆದ್ದರಿಂದ ನಿಮ್ಮ ಹೆಸರು ಪ್ರಸಿದ್ಧವಾಗಿದೆ. ದಿಲ್ವಾಡಾ ಮಂದಿರದಲ್ಲಿ ಶಿವ, ಆದಿದೇವ, ಆದಿದೇವಿ ಮತ್ತು ನೀವು ಮಕ್ಕಳಿದ್ದೀರಿ ಏಕೆಂದರೆ ನೀವೀಗ ಸೇವೆ ಮಾಡುತ್ತೀರಿ. ತಂದೆಯು ಪತಿತರನ್ನು ಪಾವನ ಮಾಡಲು ಬರುತ್ತಾರೆ ಆದ್ದರಿಂದ ನೀವು ಮಕ್ಕಳ ಸಹಯೋಗವನ್ನು ತೆಗೆದುಕೊಳ್ಳುತ್ತಾರೆ. ತಂದೆಯು ತಿಳಿಸುತ್ತಾರೆ- ಯಾರ್ಯಾರು ನನ್ನ ಸಹಯೋಗಿಗಳಾಗುತ್ತಾರೆ ಅವರನ್ನು ನಾನು ತಿಳಿದುಕೊಂಡಿದ್ದೇನೆ. ಇದಂತೂ ಯಾರು ಬೇಕಾದರೂ ತಿಳಿದುಕೊಳ್ಳಬಹುದು. ಇದರ ಪ್ರತಿಯಾಗಿ ನಂತರ ನಿಮ್ಮನ್ನು ಸ್ವರ್ಗದ ಮಾಲೀಕರನ್ನಾಗಿ ಮಾಡುತ್ತೇನೆ. ವಿದ್ಯಾರ್ಥಿಗಳೆಲ್ಲರೂ ಒಂದೇ ತರಹ ಇರುವುದಿಲ್ಲ. ಇದು ಮನುಷ್ಯರನ್ನು ದೇವತೆಗಳನ್ನಾಗಿ ಮಾಡುವ ಶಿವತಂದೆಯ ಅಂಗಡಿಗಳಾಗಿವೆ. ನೀವು ಅವಿನಾಶಿ ಜ್ಞಾನರತ್ನಗಳ ವ್ಯಾಪಾರ ಮಾಡುತ್ತೀರಿ. ಈ ತಂದೆಯು ಎಷ್ಟೊಂದು ಸಾಧಾರಣವಾಗಿದ್ದಾರೆ! ಸತ್ಯ ಮತ್ತು ಅಸತ್ಯದಲ್ಲಿ ಎಷ್ಟೊಂದು ಅಂತರವಿದೆ. ಸತ್ಯವನ್ನು ತಿಳಿಸುವವರಂತೂ ಒಬ್ಬರೇ ತಂದೆಯಾಗಿದ್ದಾರೆ. ಉಳಿದವರೆಲ್ಲರೂ ಅಸತ್ಯವಾಗಿದ್ದಾರೆ. ಅತಿದೊಡ್ಡ

ಅಸತ್ಯವೇನೆಂದರೆ ಶ್ರೀಮತವನ್ನು ಕೊಡುವ ಪರಮಪಿತ ಪರಮಾತ್ಮನನ್ನು ಸರ್ವವ್ಯಾಪಿ ಎಂದು ಹೇಳಿಬಿಡುತ್ತಾರೆ! ಮೊದಲಂತೂ ಬೇಅಂತ್ (ಅಂತ್ಯವಿಲ್ಲದ) ಎಂದು ಹೇಳುತ್ತಿದ್ದರು, ರಾವಣ ಯಾರು, ಯಾವಾಗ ಬಂದರು- ಇದೂ ಸಹ ಯಾರಿಗೂ ಗೊತ್ತಿಲ್ಲ. ರಾವಣನನ್ನು ಅವರು ತ್ರೇತಾಯುಗದಲ್ಲಿ ತೆಗೆದುಕೊಂಡು ಹೋಗಿದ್ದಾರೆ ಮತ್ತು ಕೃಷ್ಣನನ್ನು ದ್ವಾಪರದಲ್ಲಿ ತೆಗೆದುಕೊಂಡು ಹೋಗುತ್ತಾರೆ. ಸತ್ಯಯುಗವನ್ನು ಅರಿತುಕೊಂಡೇ ಇಲ್ಲ. ರಾಮ-ಸೀತೆಯು ತ್ರೇತಾಯುಗದಲ್ಲಿದ್ದರು ಅಲ್ಲಿ ರಾವಣನ ಮಾತೇ ಬರುವುದಿಲ್ಲ ಎಲ್ಲವೂ ಇಲ್ಲಿಯ ಮಾತುಗಳಾಗಿವೆ. ಇದಂತೂ ಅಸತ್ಯವನ್ನೇ ಹೇಳಿಬಿಡುತ್ತಾರೆ. ಈಗ ಮಕ್ಕಳಿಗೆ ತಿಳಿಸಲಾಗಿದೆ. ಅನೇಕ ವಿಷಯಗಳು ಬರುತ್ತವೆ ಅದನ್ನು ಧಾರಣೆ ಮಾಡಬೇಕಾಗಿದೆ. ಎಲ್ಲಿಯಾದರೂ ಇರಿ, ಮುರುಳಿಯ ವಿಷಯಗಳನ್ನು ತರಿಸಿಕೊಂಡು ಓದಬೇಕು. ಸಮಯವಿಲ್ಲವೆಂದು ಹೇಳಬಾರದು. ನಾವು ಈಶ್ವರೀಯ ವಿದ್ಯಾರ್ಥಿಗಳೆಂದು ಹೇಳಿ ನಮಗೆ ಬಿಡುವಿಲ್ಲವೆಂದು ಹೇಳಿದರೆ ಅವರಿಗೆ ಏನು ಹೇಳುತ್ತೀರಿ. ಅನ್ಯರಿಗೆ ಹೇಗೆ ಧಾರಣೆ ಮಾಡಿಸುತ್ತೀರಿ? ಪ್ರತಿನಿತ್ಯವೂ ಇಷ್ಟೊಂದು ಮುರುಳಿಯ ವಿಷಯಗಳು ನಡೆಯುತ್ತವೆ. ಒಂದುವೇಳೆ ಆ ಮುರುಳಿಯನ್ನೇ ಕೇಳದಿದ್ದರೆ ಅಥವಾ ಹೇಳದಿದ್ದರೆ ಧಾರಣೆಯು ಹೇಗಾಗುತ್ತದೆ? ಇದಂತೂ ವಿದ್ಯೆಯಾಗಿದೆ. ಓದಿಸುವವರು ಒಬ್ಬರೇ ಸುಪ್ರೀಂ ಶಿಕ್ಷಕನಾಗಿದ್ದಾರೆ. ಒಂದುವೇಳೆ ಮುರುಳಿಯನ್ನೇ ಕೇಳದಿದ್ದರೆ ಮುರುಳಿಯನ್ನು ಅನ್ಯರಿಗೆ ಹೇಗೆ ತಿಳಿಸುತ್ತೀರಿ?

ತಂದೆಯು ಜನನ-ಮರಣ ರಹಿತನಾಗಿದ್ದಾರೆ, ಅವರು ಪುನರ್ಜನ್ಮವನ್ನು ತೆಗೆದುಕೊಳ್ಳುವುದಿಲ್ಲ ಎಂಬುದನ್ನಂತೂ ಮಕ್ಕಳು ತಿಳಿಯುತ್ತೀರಿ ಆದರೆ ಅವರ ಜಯಂತಿಯನ್ನು ಆಚರಿಸುತ್ತೀರಿ. ಮನುಷ್ಯರಂತೂ ಶಿವಜಯಂತಿಯನ್ನೇ ಸಮಾಪ್ತಿ ಮಾಡುತ್ತಾ ಹೋಗುತ್ತಾರೆ. ಶಿವನ ಜನ್ಮವು ಹೇಗಾಯಿತು, ಯಾರು ಮಾಡಿರಬಹುದು? ಎಂಬುದನ್ನು ಈಗ ತಿಳಿಸುವವರು ಯಾರು! ಗೀತೆಯಲ್ಲಿ ಕೃಷ್ಣನ ಹೆಸರನ್ನು ಹಾಕಿದ್ದಾರೆ ಆದರೆ ಅದೇ ರೂಪದಲ್ಲಂತೂ ಬರಲು ಸಾಧ್ಯವಿಲ್ಲ. ಕೃಷ್ಣನನ್ನು ವೈಕುಂಠನಾಥನೆಂದು ಕರೆಯುತ್ತಾರೆ, ತ್ರಿಲೋಕಿನಾಥನಲ್ಲ ಅಂದಾಗ ವೈಕುಂಠ ಅಥವಾ ಸ್ವರ್ಗ ಇಲ್ಲಿಯೇ ಇತ್ತು, ಕೃಷ್ಣನು ಇಲ್ಲಿಯೇ ಇದ್ದರು, ರಾಧಾ-ಕೃಷ್ಣರು ಸಹೋದರ-ಸಹೋದರಿಯಾಗಿರಲಿಲ್ಲ. ಇಬ್ಬರೂ ಬೇರೆ-ಬೇರೆ ತಮ್ಮ-ತಮ್ಮ ರಾಜಧಾನಿಯಲ್ಲಿದ್ದರು. ಸ್ವಯಂವರವು ಹೇಗಾಗುತ್ತದೆ ಎಂಬುದನ್ನೂ ಮಕ್ಕಳೇ ಸಾಕ್ಷಾತ್ಕಾರದಲ್ಲಿ ನೋಡಿದ್ದೀರಿ. ತಂದೆಯು ಪ್ರಾರಂಭದಲ್ಲಿ ನಿಮ್ಮನ್ನು ಬಹಳ ಖುಷಿಪಡಿಸಿದ್ದರು. ಏಕಾಂತವಾಗಿ ಒಳಗೆ ಭಟ್ಟಿಯಲ್ಲಿ ಕುಳಿತಿದ್ದಿರಿ. ಯಾವುದೇ ಮಿತ್ರಸಂಬಂಧಿ ಮುಂತಾದವರೊಂದಿಗೆ ಸೇರುತ್ತಿರಲಿಲ್ಲ ಅಂದಾಗ ತಂದೆಯು ಬಹಳಷ್ಟು ತೋರಿಸಿದರು ಪುನಃ ಅಂತ್ಯದಲ್ಲಿ ನೀವು ಬಹಳಷ್ಟು ನೋಡುತ್ತೀರಿ. ನಾವು ಹೇಗೆ ವೈಕುಂಠದಲ್ಲಿ ಕುಳಿತಿದ್ದೇವೆ ಎಂದು ತಿಳಿಯುತ್ತೀರಿ. ಅಂತ್ಯದ ಸಮಯದಲ್ಲಿ ಮನುಷ್ಯರು ಬೇಸರವಾಗುತ್ತಾರೆ. ಬಹಳ ಆಪತ್ತುಗಳು ಬರಲಿವೆ, ಇದಕ್ಕೆ ರಕ್ತಪಾತವೆಂದು ಹೇಳಲಾಗುತ್ತದೆ, ಇದು ಪ್ರಪಂಚದವರಿಗೆ ಗೊತ್ತಿಲ್ಲ. ಆ ಸಮಯದಲ್ಲಿ ಸರ್ಕಾರವು ಯಾವುದೇ ಮತ ತೆಗೆದುಕೊಳ್ಳುತ್ತದೆ ಎಂದಲ್ಲ. ಈಗಂತೂ ಎಲ್ಲರ ವಿನಾಶವಾಗಲಿದೆ, ನೀವು ಅವಿನಾಶಿ ತಂದೆಯನ್ನು, ಅವಿನಾಶಿ ಪದವಿಯನ್ನು ಪಡೆಯುತ್ತಿದ್ದೀರಿ. ಭಲೆ ಪ್ರಜೆಯಲ್ಲಿ ಬಂದರೂ ಸಹ ಅಹೋ ಸೌಭಾಗ್ಯ. ಅಲ್ಲಿ ಸುಖವೇ ಸುಖವಿದೆ. ಇಲ್ಲಂತೂ ದುಃಖವೇ ದುಃಖವಿದೆ. ಈಗ ತಂದೆಯು ಓದಿಸಲು ಬಂದಿದ್ದಾರೆಂದರೆ ಓದಲೇಬೇಕಲ್ಲವೆ. ಭಲೆ ಕೆಲಸವಿರಬಹುದು ಆದರೆ ಕೈ ಕೆಲಸ ಮಾಡುತ್ತಿರಲಿ ಬುದ್ಧಿಯೋಗವು ತಂದೆಯ ಜೊತೆ ಜೋಡಿಸಲ್ಪಟ್ಟಿರಲಿ. ಗೃಹಸ್ಥ ವ್ಯವಹಾರದಲ್ಲಿದ್ದರೂ ಸಹ ತಂದೆಯನ್ನು ನೆನಪು ಮಾಡಬೇಕಾಗಿದೆ. ತಂದೆಯು ಸ್ವರ್ಗದ ಮಾಲೀಕರನ್ನಾಗಿ ಮಾಡುತ್ತಾರೆಂದರೆ ಅವರನ್ನು ಏನೆಂದು ತಿಳಿಯುತ್ತೀರಿ! 21 ಜನ್ಮಗಳ ಕಾಲ ರಾಜ್ಯಭಾರ ಮಾಡುತ್ತೀರಿ. ಯಾವುದೇ ಚಿಂತೆಯ ಮಾತಿಲ್ಲ. ಇಲ್ಲಂತೂ ನೋಡಿ, ಮನುಷ್ಯರಿಗೆ ಎಷ್ಟೊಂದು ಚಿಂತೆಯಿರುತ್ತದೆ ಆದರೆ ಸತ್ಯಯುಗದಲ್ಲಿ ಚಿಂತೆಯೇ ಇರುವುದಿಲ್ಲ. ನೀವು ಅಲ್ಲಿ ಪ್ರಾಲಬ್ಧವನ್ನು ಭೋಗಿಸುತ್ತೀರಿ ಆದರೆ ಅಲ್ಲಿ ಇದೂ ಸಹ ಗೊತ್ತಿರುವುದಿಲ್ಲ. ನಾವು ಅವಿನಾಶಿ ತಂದೆಯಿಂದ ಆಸ್ತಿಯನ್ನು ಪಡೆಯುತ್ತಿದ್ದೇವೆ ಎನ್ನುವ ಜ್ಞಾನವು ನಿಮಗಷ್ಟೇ ಇದೆ. ನಂತರ ತಾನಾಗಿಯೇ ನಾವು ರಾಜಧಾನಿಯ ಆಸ್ತಿಯನ್ನು ಪಡೆಯುತ್ತಿರುತ್ತೇವೆ. ದಾನ-ಪುಣ್ಯ ಮಾಡುವುದರಿಂದ ರಾಜರಾಗುವುದಿಲ್ಲ. ಅದು ಈ ಸಮಯದ ಪುರುಷಾರ್ಥದ ಪ್ರಾಲಬ್ಧವಾಗಿದೆ ಅಂದಮೇಲೆ ಯಾವುದರಿಂದ 21 ಜನ್ಮದ ಪ್ರಾಲಬ್ಧವಾಗುತ್ತದೆಯೋ ಅಂತಹ ಪುರುಷಾರ್ಥ ಎಷ್ಟೊಂದು ಮಾಡಬೇಕು. ಅಲ್ಲಿ ಪುರುಷಾರ್ಥ ಪ್ರಾಲಬ್ಧದ ಮಾತೇ ಇರುವುದಿಲ್ಲ. ಅದಕ್ಕಾಗಿ ಪುರುಷಾರ್ಥ ಮಾಡಬೇಕಾಗುವಂತಹ ಯಾವುದೇ ಅಪ್ರಾಪ್ತ ವಸ್ತುವು ಅಲ್ಲಿರುವುದಿಲ್ಲ. ಎಲ್ಲರೂ ಧನವಂತರಾಗಿರುತ್ತಾರೆ. ನಾವು ನ್ಯಾಯಾಧೀಶರಾಗಬೇಕು, ವೈದ್ಯರಾಗಬೇಕೆಂದು ಇಲ್ಲಿನ ಮನುಷ್ಯರು ಓದುತ್ತಾರೆ ಆದರೆ ಅಲ್ಲಿ ನ್ಯಾಯಾಧೀಶರಾಗಲಿ, ವೈದ್ಯರಾಗಲಿ ಇರುವುದಿಲ್ಲ. ಅಲ್ಲಿ ಯಾವುದೇ ಕಳ್ಳಕಾಕರಿರುವುದಿಲ್ಲ. ನೀವು ಇಡೀ ವಿಶ್ವದ ಮಾಲೀಕರಾಗುತ್ತೀರಿ. ಯಾವುದೇ ಮಾತಿನ ಚಿಂತೆಯಿರುವುದಿಲ್ಲ. ಆಹಾರ ಇತ್ಯಾದಿಗಳಿಗೆ ಹಣವನ್ನಿಡುವ ಅವಶ್ಯಕತೆಯಿಲ್ಲ. ಬಾಬಾರವರ ಕಾಲದಲ್ಲೂ ಸಹ 8-10 ಆಣೆಗೆ ಮಣದಷ್ಟು ದವಸಧಾನ್ಯಗಳು ಸಿಗುತ್ತಿತ್ತು. ಅಂದಾಗ ಅದರಿಂದ ಮುಂದೆ ಏನಾಗುವುದು? ಈಗಂತೂ ಎಷ್ಟೊಂದು ಬೆಲೆ ಏರಿದೆ. ಬಹುಶಃ ಮತ್ತಷ್ಟು ಬೆಲೆಹೆಚ್ಚುವುದು ನಂತರ ಕಡಿಮೆಯಾಗುವುದು. ನಾಟಕದನುಸಾರ ಎಲ್ಲವೂ ನಿಮಗೆ ಸಿಗಲಿದೆ. ಅವರ ಸಹಯೋಗದಿಂದ ನಿಮಗೆ ರಾಜಧಾನಿಯು ಸಿಗಲಿದೆ. ಎರಡು ಕೋತಿಗಳು ಜಗಳವಾಡುತ್ತಿದ್ದಾಗ ನಡುವೆ ಬೆಣ್ಣೆಯ ಉಂಡೆಯು ನಿಮಗೆ ಸಿಗಲಿದೆ. ಓದಿಸುವವರು ಯಾರೆಂದು ಪ್ರಪಂಚಕ್ಕೆ ಗೊತ್ತಿಲ್ಲ. ಇವರು ಗುಪ್ತವೇಷದಲ್ಲಿದ್ದಾರೆ. ನಿಮಗೆ ಒಂದು ಸೆಕೆಂಡಿನಲ್ಲಿ ವೈಕುಂಠದ ರಾಜಧಾನಿಯನ್ನು ಕೊಡುತ್ತಾರೆ. ಹೇಗೆ ಖುದಾದೋಸ್ತ್ ಕಥೆಯಿದೆಯಲ್ಲವೆ. ಈ ಮಹಿಮೆಯು ತಂದೆಯದಾಗಿದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಒಳ್ಳೆಯ ಬುದ್ಧಿವಂತ ಮಾರಾಟಗಾರರಾಗಿ ಅವಿನಾಶಿ ಜ್ಞಾನರತ್ನಗಳ ವ್ಯಾಪಾರ ಮಾಡಬೇಕಾಗಿದೆ. ಅವಿನಾಶಿ ಪ್ರಾಲಬ್ಧವನ್ನು ಮಾಡಿಕೊಳ್ಳಲು ತಮ್ಮ ಬುದ್ಧಿಯೋಗವನ್ನು ಒಬ್ಬ ತಂದೆಯ ಜೊತೆ ಜೋಡಿಸಬೇಕಾಗಿದೆ.

2. ಗೌರವಾನ್ವಿತವಾಗಿ ಉತ್ತೀರ್ಣರಾಗಲು ಸತ್ಯ-ಸತ್ಯ ಪ್ರಿಯತಮೆಯರಾಗಬೇಕಾಗಿದೆ. ನಿರಂತರ ಒಬ್ಬ ಪ್ರಿಯತಮನ ನೆನಪಿನಲ್ಲಿರಬೇಕಾಗಿದೆ.

ವರದಾನ: ಸರ್ವಶಕ್ತಿವಂತನ ಜೊತೆಗಾರನಾಗಿ ಸರ್ವರ ಪ್ರತಿ ಶುಭ ಭಾವನೆ ಇಡುವಂತಹವರು ಚಿಂತನೆ ಅಥವಾ ಚಿಂತಾ ಮುಕ್ತ ಭವ

ಕೆಲವು ಮಕ್ಕಳು ಚಿಂತನೆ ಮಾಡುತ್ತಾರೆ ಇಂತಹವರ ಖಾಯಿಲೆ ವಾಸಿಯಾಗಿಬಿಡಲಿ, ಮಗ ಅಥವಾ ಪತಿ ಜ್ಞಾನದಲ್ಲಿ ನಡೆಯುವಂತಾಗಲಿ, ವ್ಯಾಪಾರ ಸರಿಹೋಗಲಿ.....ಈ ಭಾವನೆಯಂತೂ ಒಳ್ಳೆಯದೆ, ಆದರೆ ನಿಮ್ಮ ಈ ಇಚ್ಛೆ ಪೂರ್ಣಯಾವಾಗ ಆಗುವುದೆಂದರೆ ಯಾವಾಗ ಸ್ವಯಂ ಹಗುರವಾಗಿ ತಂದೆಯಿಂದ ಶಕ್ತಿ ಪಡೆದಾಗ. ಅದಕ್ಕಾಗಿ ಬುದ್ಧಿರೂಪಿ ಪಾತ್ರೆ ಖಾಲಿಯಾಗಿರಬೇಕು. ಎಲ್ಲರ ಕಲ್ಯಾಣ ಬಯಸಿದ್ದೇ ಆದರೆ ಸ್ವಯಂ ಶಕ್ತಿ ಸ್ವರೂಪರಾಗಿ ಸರ್ವ ಶಕ್ತಿವಂತನ ಜೊತೆಗಾರರಾಗಿ ಶುಭ ಭಾವನೆ ಇಟ್ಟು ನಡೆಯುತ್ತಾ ಹೋಗಿ. ಚಿಂತನೆ ಅಥವಾ ಚಿಂತಾ ಮುಕ್ತರಾಗಿ, ಬಂಧನದಲ್ಲಿ ಸಿಕ್ಕಿಕೊಳ್ಳಬೇಡಿ.

ಸ್ಲೋಗನ್: ಯಾರು ಪ್ರಶ್ನೆಗಳಿಂದ ದೂರವಿರುತ್ತಾರೆ ಅವರೇ ಸದಾ ಪ್ರಸನ್ನಚಿತ್ತರಾಗಿರುತ್ತಾರೆ.